ಪ್ರಶ್ನೆ ಸಂಖ್ಯೆ 128ಕ್ಕೆ ಅನುಬಂಧ

ಬೆಳಗಾವಿ ಜಿಲ್ಲೆಯ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು ಹಾಗೂ ಫಲಾನುಭವಿಗಳ ವಿವರ

ಕ್ರ. ಸಂ	ಯೋಜನೆ / ಕಾರ್ಯಕ್ರಮ	ಫಲಾನುಭವಿಗಳ ಸಂಖ್ಯೆ
1	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ಸಾಮಾನ್ಯ	131
2	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ವಿಶೇಷ ಅಭಿವೃದ್ಧಿ ಯೋಜನೆ	181
3	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ವಿಶೇಷ ಘಟಕ ಯೋಜನೆ	28
4	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ಗಿರಿಜನ ಉಪ ಯೋಜನೆ	35
5	ನೂತನ ಕರ್ತೃತ್ವ ಶಕ್ತಿ – ವಿಶೇಷ ಘಟಕ ಯೋಜನೆ	30
6	ನೂತನ ಕರ್ತೃತ್ವ ಶಕ್ತಿ –ಗಿರಿಜನ ಉಪ ಯೋಜನೆ	30
7	ದ್ವಿತಳಿ ಚಾಕಿ ವೆಚ್ಚ	31
8	ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್	158
9	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	25
10	ರೇಷ್ಮೆ ಗೂಡು ಸಾಗಾಣಿಕೆ ವೆಚ್ಚ	76

ಅಗ್ನಿ ಶಾಮಕ ಕಟ್ಟಡ

3(130); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನಲ್ಲಿರುವ ಅಗ್ನಿಶಾಮಕ ಕಟ್ಟಡವು ತಾತ್ಕಾಲಿಕ ಶೆಡ್ಡಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಹೊಸ ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರದ 2 ಎಕರೆ ಜಮೀನನ್ನು ಮೀಸಲಿಟ್ಟಿರುವುದು ನಿಜವೇ, ಕಟ್ಟಡಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕಟ್ಟಡದ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಿರುವ ಅನುದಾನವೆಷ್ಟು?

ಉ) ಈ ಕಟ್ಟಡದ ನಕ್ಷೆ ಹಾಗೂ ರೂಪು ರೇಷೆಗಳನ್ನು ಸಿದ್ದಪಡಿಸಿದೆಯೇ?

ಊ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಸಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಸರ್ಕಾರವು ಆದೇಶ ಸಂಖ್ಯೆ ಒಇ: 80: ಕಅಸೇ :2006 ದಿ:03–08–2006 ರಲ್ಲಿ ಬೆಳಗಾವಿ ಜಿಲ್ಲೆ ರಾಯಭಾಗ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪಿಸಲು ಮಂಜೂರಾತಿ ನೀಡಿದೆ. ರಾಯಭಾಗ ತಾ॥ ಮತ್ತು ಗ್ರಾಮದ ರಿ.ಸ.ಸಂ.839 ರಲ್ಲಿ ಅಗ್ನಿಶಾಮಕ ಠಾಣೆಗೆ ಖಾಯಂ ಕಟ್ಟಡ ನಿರ್ಮಿಸಲು ಅವಶ್ಯವಿರುವ 2 ಎಕರೆ ನಿವೇಶನವನ್ನು ಮಂಜೂರು ಮಾಡಲಾಗಿರುತ್ತದೆ. ಈ ನಿವೇಶನದಲ್ಲಿ ಹಾಲಿ ಪಟ್ಟಣ ಪಂಚಾಯತ್, ರಾಯಭಾಗರವರು ನಿರ್ಮಿಸಿ ಒದಗಿಸಿರುವ ತಾತ್ಕಾಲಿಕ ಕಟ್ಟಡದಲ್ಲಿ ದಿ: 28–01–2013 ರಿಂದ ಅಗ್ನಿಶಾಮಕ ಠಾಣೆ ಕಾರ್ಯ ನಿರ್ವಹಿಸುತ್ತಿದೆ.

ಆ) 2015–16 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅನುದಾನವನ್ನು ಒದಗಿಸಿಕೊಂಡು ರಾಯಭಾಗ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಹೌದು,

2015–16ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಅನುದಾನವನ್ನು ಒದಗಿಸಿಕೊಂಡ ನಂತರ ಇಲಾಖೆಯಿಂದ ಪ್ರಸ್ತಾವನೆಯನ್ನು ಪಡೆದು ಈ ಬಗ್ಗೆ ಪರಿಶೀಲಿಸಲಾಗುವುದು.

ಈ) 2015–16 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅನುದಾನವನ್ನು ಒದಗಿಸಿಕೊಂಡು ರಾಯಭಾಗ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಉ) – ಇಲ್ಲ –

ಊ) 2015–16 ನೇ ಸಾಲಿನ ವಿಶೇಷ ಅಭೀವೃದ್ಧಿ ಯೋಜನೆ ಅಡಿಯಲ್ಲಿ ಅನುದಾನವನ್ನು ಒದಗಿಸಿಕೊಂಡು ನಂತರ ರಾಯಭಾಗ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣ ಮಾಡಲು ಪರಿಶೀಲಿಸಲಾಗುವುದು.

ನರ್ಮ್ ಯೋಜನೆಯಡಿ ಕಾಮಗಾರಿಗಳು

4(131); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ. (ರಾಯಭಾಗ)

ಅ) ಕಳೆದ 2 ವರ್ಷಗಳಿಂದ ಬೆಳಗಾವಿ ಜಿಲ್ಲೆಗೆ ನರ್ಮ್ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನವೆಷ್ಟು; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಿಂದ ರಾಯಭಾಗ ತಾಲ್ಲೂಕಿನಲ್ಲಿ ಎಷ್ಟು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ; (ಪ್ರಾರಂಭಿಸಲಾದ ಕಾಮಗಾರಿಗಳ ವಿವರ ನೀಡುವುದು);

ಇ) ಇದಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು; ಪ್ರಸ್ತುತ ಸಾಲಿನಲ್ಲಿ ನರ್ಮ್ ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಲಿರುವ ಅನುದಾನವೆಷ್ಟು; (ವಿವರ ನೀಡುವುದು)?